ಅಧ್ಯಾಯ 3 ಅಭ್ಯಾಸದ ಹಾಳೆ

## ಯೇಸುವು ಮಾನವನಿಗಾಗಿ ಹೊಸ ಮಾರ್ಗವಾಗಿರುವನೋ?

I. ಹಳೆಯ ಮತ್ತು ಹೊಸ ಮಾರ್ಗಗಳು ಒಂದೇಯಾಗಿರುವವೋ?

1. ಹಳೆಯ ಮಾರ್ಗದ ಅಧೀನತೆಯಲ್ಲಿ ಯಾಜಕನು ಪ್ರಾಣಿಯ ________ ದೊಂದಿಗೆ ದೋಷಪರಿಹಾರ ಮಾಡಿದನು. ಯಾಜಕಕಾಂಡ 4:30, 31
2. ಇದು ಕೇವಲ ಒಂದು ________ ಮಾತ್ರ ಆಗಿತ್ತು (ಇಬ್ರಿಯ 10:1) ಇದು ತೆಗೆದು ಹಾಕಲಾರದ್ದಾಗಿತ್ತು. ಇಬ್ರಿಯ 10:4
3. ಯೇಸುವಿನ ________ ವು ಜೀವವುಳ್ಳ ಹೊಸದಾರಿ ಆಗಿತ್ತು. ಇಬ್ರಿಯ 10:19, 20
4. ಯೇಸುವಿನ ________ ಮುಖಾಂತರ ಹೊಸ ಒಡಂಬಡಿಕೆಯು ಜಾರಿಯಲ್ಲಿ ಬಂದಿತು (ಇಬ್ರಿಯ 9:16, 17) ಮತ್ತು ಈ ಕಾರಣದಿಂದ ________ ಪ್ರಸಂಗಿಸಲ್ಪಡಲು ಪ್ರಾರಂಭವಾಯಿತು. ಲೂಕ 24:46, 47

II. ಬೋಧಿಸಲ್ಪಡಲಿಕ್ಕಾಗುವಂತೆ ನೂತನ ಮಾರ್ಗಕ್ಕಾಗಿ ಯಾವ ಸಿದ್ಧತೆಯು ಮಾಡಲ್ಪಟ್ಟಿತು?

1. ವಾಕ್ಯವು ________ ನಿಂದ ಹೊರಗೆ ಹೋಗುವುದೆಂದು ದೇವರು ವಾಗ್ದಾನ ಮಾಡಿದನು. ಯೆಶಾಯ 2:3
2. ________ ಪರಿಶುದ್ಧಾತ್ಮನು ಬರಲು, ಅಪೊಸ್ತಲರು ಮೊದಲು ________ ನಲ್ಲಿಯೂ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ, ಮತ್ತು ಭೂಲೋಕದ ಕಟ್ಟಕಡೆಯ ವರೆಗೆ ಸಾಕ್ಷಿಗಳಾಗಿರುವರು. ಅಪೊಸ್ತಲರ ಕೃತ್ಯಗಳು 1:8
3. ಆತ್ಮನು ಬಂದಾಗ, ಆತನು ಅವರಿಗೆ ________ ಸಂಗತಿಗಳನ್ನು ಬೋಧಿಸುವನು ಮತ್ತು ಯೇಸುವು ಬೋಧಿಸಿದ್ದನ್ನು ________ ಅವರ ನೆನಪಿಗೆ ತರುವನು (ಯೋಹಾನ 14:26) ಮತ್ತು ಸತ್ಯಕ್ಕೆ ________ ಸೇರಿಸುವನು. ಯೋಹಾನ 16:13
4. ಯೆರೂಸಲೇಮಿನಲ್ಲಿ (ಅಪೊಸ್ತಲರ ಕೃತ್ಯಗಳು 2:5) ಪಂಚಾಶತ್ತಮ ದಿನದಂದು ಅವರು ________ ತುಂಬಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 2:4) ಮತ್ತು ಯೇಸುವಿಗಾಗಿ ಸಾಕ್ಷಿ ಕೊಡಲು ಪ್ರಾರಂಭಿಸಿದರು. ಅಪೊಸ್ತಲರ ಕೃತ್ಯಗಳು 2:22

III. ಯೆರೂಸಲೇಮಿನಲ್ಲಿ ಬೋಧಿಸಲು ಪ್ರಾರಂಭಿಸಲು ಯಾವುದು ಪಾಪಗಳ ಕ್ಷಮಾಪಣೆಗಾಗಿ ಮಾಡಲ್ಪಡಲು ಅವಶ್ಯವಾಗಿತ್ತು?

1. ನಂಬಿದ್ದವರಿಗೆ ಪೇತ್ರನು ________ ಮತ್ತು ಪಾಪಗಳ ಕ್ಷಮಾಪಣೆಗಾಗಿ ಯೇಸುಕ್ರಿಸ್ತನ ಹೆಸರಿನಲ್ಲಿ ________ ಎಂದು ಹೇಳಿದನು. ಅಪೊಸ್ತಲರ ಕೃತ್ಯಗಳು 2:36-38
2. ಯೆರೂಸಲೇಮಿನಲ್ಲಿ ಬೋಧಿಸಲ್ಪಟ್ಟ ಈ ಸಂದೇಶವು ________

ದೇಶದವರಿಗೂ ಇರುವುದು. ಲೂಕ 24:47


IV. ಇದು ಬೋಧಿಸಲ್ಪಟ್ಟಾಗ, ಜನರು ಹೇಗೆ ಪ್ರತಿಕ್ರಿಯೆ ತೋರಿಸಿದರು? (ಈ ಕೆಳಗಿನ ಉಲ್ಲೇಖಗಳು ಅಪೊಸ್ತಲರ ಕೃತ್ಯಗಳಲ್ಲಿದೆ.)

1. 2:41 -- ಯೆರೂಸಲೇಮ ________
2. 8:12 -- ಸಮಾರ್ಯ ________
3. 8:36-39 -- ಐತಿಯೋಪ್ಯದವನು ________
4. 9:18 -- ಪೌಲನು ________
5. 10:48 -- ಕೊರ್ನೇಲ್ಯನು ________
6. 16:33 -- ಸೆರೆಮನೆಯ ಅಧಿಕಾರಿ ________
7. 18:8 -- ಕೊರಿಂಥ ________
8. 19:5 -- ಎಫೆಸ ________

V. ಅವರ ಬಾಪ್ತಿಸ್ಮದ ನಂತರ ಏನಾಯಿತು?

1. ಅವರು ________ ಜೀವಿತದಲ್ಲಿ ನಡೆಯಬೇಕು. ರೋಮಾಪುರ 6:4
2. ಅವರ ಪಾಪಗಳು ________ (ಅಪೊಸ್ತಲರ ಕೃತ್ಯಗಳು 2:38) ಮತ್ತು ________ . ಅಪೊಸ್ತಲರ ಕೃತ್ಯಗಳು 22:16
3. ಅವರು ________. ಮಾರ್ಕ 16:15, 16

Copyright 1987 - Gospel Light Pub. Co., Delight, AR 71940



**3**

# “ಯೇಸುವು ಮಾನವನಿಗಾಗಿ ಹೊಸ ಮಾರ್ಗವಾಗಿರುವನೋ?’’

“ಯೇಸುವು ಮಾನವನಿಗಾಗಿ ಹೊಸ ಮಾರ್ಗವಾಗಿರುವನೋ’’ ಎಂಬ ಈ ಅಧ್ಯಯನವನ್ನು ಮೊದಲನೆಯ ಅಧ್ಯಯನವಾಗಿ ಉಪಯೋಗಿಸಲ್ಪಡಬಹುದು ಇಲ್ಲವೇ “ಪಾಪ ಮತ್ತು ಮರಣದ ಮೂಲವು ಯಾವುದು?” (ಪಾಠ 1) ಅಥವಾ “ದೇವರ ಯೋಜನೆ ಯಾವುದು?” (ಪಾಠ 2) ಎಂಬ ಅಧ್ಯಯನವನ್ನು ಹಿಂಬಾಲಿಸಬಹುದು. ಅತೀ ಹೆಚ್ಚು ತಾರ್ಕಿಕವಾದ ಉಪಯೋಗವು ಇದನ್ನು ‘‘ದೇವರ ಯೋಜನೆ ಯಾವುದು?’’ ಎಂಬುದನ್ನು ಹಿಂಬಾಲಿಸುವುದು.

**ಉದ್ದೇಶ**

“ಯೇಸುವು ಮಾರ್ಗ’’ ಎಂಬ ಹಾಳೆಯ ಉದ್ದೇಶವು ಯೇಸುವಿನ ರಕ್ತವು ಮಾನವನ ಕ್ಷಮಾಪಣೆಯ ತಳಹದಿಯಂತೆ, ಯೆರೂಸಲೇಮಿನಿಂದ ಪ್ರಸಂಗಿಸಲ್ಪಡಲು ಪ್ರಾರಂಭಿಸಲ್ಪಟ್ಟಿತು ಎಂಬುದನ್ನು ತೋರಿಸುವುದಾಗಿದೆ. ಯೆರೂಸಲೇಮಿನಲ್ಲಿ ಪ್ರಸಂಗಿಸಲ್ಪಟ್ಟ ಕ್ಷಮಾಪಣೆಯ ಶರತ್ತುಗಳು ಎಲ್ಲಾ ಜನಾಂಗಗಳಿಗಾಗಿದ್ದವು.

**ಸಂಕ್ಷಿಪ್ತದಲ್ಲಿ ಪಾಠ**

ಈ ಅಧ್ಯಯನ ಪ್ರಶ್ನಾವಳಿಯು, ಪ್ರಾಣಿ ಯಜ್ಞಗಳು, ನಿಜವಾದ ಯಜ್ಞದ ಕೇವಲ ಛಾಯೆಗಳು, ಪಾಪಗಳನ್ನು ಕ್ಷಮಿಸಲಾರದವುಗಳಾಗಿದ್ದವು, ಮತ್ತು ಈಗ ಯೇಸುವಿನ ರಕ್ತವು ಕ್ಷಮಾಪಣೆಯ ಒಂದು ನೂತನವಾದ ಮತ್ತು ಪರಿಣಾಮಕಾರಿಯಾದ ಮಾರ್ಗವನ್ನು ಒದಗಿಸುತ್ತದೆ ಎಂಬುದನ್ನು ತೋರಿಸುತ್ತದೆ. ಸಾಕಷ್ಟು ಸಿದ್ಧತೆಯ ನಂತರ, *ನೂತನ ಮಾರ್ಗವು* ಯೆರೂಸಲೇಮಿನಿಂದ ಪ್ರಸಂಗಿಸಲ್ಪಡಲು ಪ್ರಾರಂಭಿಲ್ಪಟ್ಟಿತು, ಮತ್ತು ಆಮೇಲೆ ಲೋಕದ ಉಳಿದ ಭಾಗಗಳಿಗೆ ಪ್ರಸಂಗಿಸಲ್ಪಟ್ಟಿತು. ಯೆರೂಸಲೇಮಿನಲ್ಲಿ ಬೋಧಿಸಲ್ಪಟ್ಟಂಥ, ಅಪೊಸ್ತಲರ ಕೃತ್ಯಗಳಲ್ಲಿ ದಾಖಲೆಯಾದಂಥ, ಕ್ಷಮಾಪಣೆಯ ಶರತ್ತುಗಳು ಜಗತ್ತಿನ ಉಳಿದ ಭಾಗವು ಪೂರೈಸಲ್ಪಡತಕ್ಕ ಶರತ್ತುಗಳೇ ಆಗಿವೆ. ಅಪೊಸ್ತಲರ ಕೃತ್ಯಗಳಲ್ಲಿಯ ಎಲ್ಲಾ ಪ್ರತಿಕ್ರಿಯೆಗಳು ಒಂದೇ ಆಗಿವೆ, ಆದುದರಿಂದ ಎಲ್ಲರಿಗೂ ಕ್ಷಮಾಪಣೆಯ ಅದೇ ಶರತ್ತುಗಳು ಬೋಧಿಸಲ್ಪಟ್ಟಿರಬೇಕು.

**ಪೀಠಿಕೆ**

ಧರ್ಮಶಾಸ್ತ್ರವು ದಯೆಯನ್ನು ಒದಗಿಸಲಾರವೆಂದು ಹಿಂದಿನ ಪಾಠದಲ್ಲಿ

ಕಲಿತುಕೊಂಡೆವು. ಅದು ದಯೆಯನ್ನು, ಕೃಪೆಯನ್ನು ಮತ್ತು ನೀತಿಯನ್ನು ಒದಗಿಸಿದರೆ, ಯೇಸುವು ಅನಾವಶ್ಯಕವಾದ, ನಿರುಪಯೋಗವಾದ ಮರಣವನ್ನು ಅನುಭವಿಸುತ್ತಿದ್ದನು. ಈ ಪಾಠದಲ್ಲಿ, ಹಳೇ ಒಡಂಬಡಿಕೆಯ ಅಧೀನತೆಯಲ್ಲಿ ಇದ್ದವರು ತಿಳಿಯದೇ ಪಾಪ ಮಾಡಿದಾಗ ಏನು ಮಾಡಿದರೆಂಬುದನ್ನು ಹುಡುಕಲಿಕ್ಕಿದ್ದೇವೆ, ಮತ್ತು ಹೊಸ ಮಾರ್ಗದಲ್ಲಿ, ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ಕ್ಷಮಾಪಣೆಗಾಗಿ ನಾವು ಮಾಡಬೇಕೆಂಬುದನ್ನು ಅಧ್ಯಯನ ಮಾಡಲಿಕ್ಕಿದ್ದೇವೆ.

**I. ಹಳೆ ಮತ್ತು ಹೊಸ ಮಾರ್ಗಗಳು**

ಅಧ್ಯಯನದ ಈ ಭಾಗದಲ್ಲಿ, *ಹಳೆ* ಒಡಂಬಡಿಕೆಯ ಅಧೀನತೆಯಲ್ಲಿದ್ದು ಕ್ಷಮಾಪಣೆಯ ಮಾರ್ಗವು *ಹೊಸ* ಒಡಂಬಡಿಕೆಯ ಅಧೀನತೆಯಲ್ಲಿಯ ಕ್ಷಮಾಪಣೆಯ ಮಾರ್ಗವು ಒಂದೇಯಾಗಿರುವುದೋ ಇಲ್ಲವೋ ಎಂಬುದನ್ನು ಯೋಚಿಸುತ್ತೇವೆ. [*ಹಿಂದಿನ ಪುಟದಲ್ಲಿ* ಪುಟದ ಎಡಗಡೆಯಲ್ಲಿ ಸಿನಾಯಿ ಬೆಟ್ಟವನ್ನು ಚಿತ್ರಿಸಿರಿ ಮತ್ತು ಅದರ ಮೇಲೆ "ಹಳೇ ಒಡಂಬಡಿಕೆ" ಎಂದು ಬರೆಯಿರಿ.]

1. ಸಾಮಾನ್ಯ ಜನರ ಪಾಪಗಳಿಗಾಗಿ ಪ್ರಾಯಶ್ಚಿತ್ತ ಮಾಡಲು ಯಾಜಕರು ಏನನ್ನು ಉಪಯೋಗಿಸಿದರು? [ಓದಿರಿ ಯಾಜಕಕಾಂಡ 4:30, 31.] ಕ್ಷಮಾಪಣೆಗಾಗಿ ಪ್ರಾಣಿಯ *ಯಾವುದನ್ನು* ಯಾಜಕರು ಉಪಯೋಗಿಸಿದರು? [ಖಾಲಿಯಾದ ಸ್ಥಳದಲ್ಲಿ "ರಕ್ತ" ಎಂದು ತುಂಬಿರಿ.]

2. ಪ್ರಾಣಿಯ ರಕ್ತವು ಕ್ಷಮಾಪಣೆಯನ್ನು ಒದಗಿಸುವುದೋ? [ಓದಿರಿ ಇಬ್ರಿಯ 10:1.] ಪ್ರಾಣಿಗಳ ರಕ್ತವು ಕೇವಲ *ಏನಾಗಿತ್ತು?* [ಖಾಲಿಯಾದ ಸ್ಥಳದಲ್ಲಿ "ಛಾಯೆ" ಎಂದು ತುಂಬಿರಿ.] ಛಾಯೆಗೆ ಯಾವುದೇ ತಿರುಳು ಇರವುದೋ? ನೀವು ಏನನ್ನು ಮಾಡುವಿರಿ, ಆಳವಾದ ತಗ್ಗನ್ನು ಸೇತುವೆಯ ಮೇಲೆ ದಾಟುವಿರೋ ಇಲ್ಲವೇ ಛಾಯೆಯ ಮೇಲೆ ದಾಟುವಿರೋ? ಛಾಯೆಯು ಏನು ಮಾಡುವುದು? ಛಾಯೆಯು ವಾಸ್ತವಿಕತೆಯ ಸ್ವಭಾವವನ್ನು ಕೇವಲ ಸೂಚಿಸುವುದಲ್ಲವೇ?

[ಓದಿರಿ ಇಬ್ರಿಯ 10:4.] ಪ್ರಾಣಿಗಳ ರಕ್ತವು *ಏನನ್ನು* ತೆಗೆದು ಹಾಕಲಾರದು? [ಖಾಲಿಯಾದ ಸ್ಥಳದಲ್ಲಿ "ಪಾಪಗಳನ್ನು" ಎಂದು ತುಂಬಿರಿ.] ಪ್ರಾಣಿಗಳ ರಕ್ತವು ವಾಸ್ತ ವಿಕತೆಯ - ಶಿಲುಬೆಯ ಮೇಲೆ ಸುರಿಸಲ್ಪಟ್ಟ ಯೇಸುವಿನ ರಕ್ತದ - ಛಾಯೆ ಮಾತ್ರವೇ ಆಗಿದೆ. [*ಅಧ್ಯಾಯನ ಪ್ರಶ್ನಾವಳಿಯ* ಹಿಂದೆ ಒಂದು ಶಿಲುಬೆಯನ್ನು ಮತ್ತು ಶಿಲುಬೆಯ ಛಾಯೆಯನ್ನು ಚಿತ್ರಿಸಿರಿ. ಪುಟ 144ನ್ನು ನೋಡಿರಿ.]

3. ಕ್ಷಮಾಪಣೆಯ ನೂತನ ಮಾರ್ಗವು ಯಾವುದು? [ಓದಿರಿ ಇಬ್ರಿಯ 10:19, 20.] ಕ್ಷಮಾಣೆಯ ನೂತನ ಮಾರ್ಗವು *ಯಾವುದು?* [ಖಾಲಿಯಾದ ಸ್ಥಳದಲ್ಲಿ "ರಕ್ತ" ಎಂದು ತುಂಬಿರಿ.]

4. ಈ ನೂತನ ಮಾರ್ಗವು ಯಾವಾಗ ಜಾರಿಯಲ್ಲಿ ಬಂದಿತು? [ಓದಿರಿ ಇಬ್ರಿಯ 9:16, 17.] ಯೇಸುವಿನ *ಯಾವುದರಲ್ಲಿ* ನೂತನ ಮಾರ್ಗವು ಬಂದಿತು? [ಖಾಲಿಯಾದ ಸ್ಥಳದಲ್ಲಿ "ಮರಣ" ಎಂದು ತುಂಬಿರಿ.] ಯೇಸುವಿನ ಹೆಸರಿನಲ್ಲಿ ಕ್ಷಮಾಪಣೆಯು *ಎಲ್ಲಿ* ಪ್ರಸಂಗಿಸಲ್ಪಡಲು ಪ್ರಾರಂಭಿಸುವುದು? [ಓದಿರಿ ಲೂಕ 24:46, 47. ಖಾಲಿಯಾದ ಸ್ಥಳದಲ್ಲಿ "ಯೆರೂಸಲೇಮ" ಎಂದು ತುಂಬಿರಿ.]

ಈ ಭಾಗದಲ್ಲಿ ನಾವು ಏನನ್ನು ಕಲಿತು ಕೊಂಡಿರುವೆವು? ಕ್ಷಮಾಪಣೆಯ ಹಳೆಯ ಮಾರ್ಗವು ಕೇವಲ ಕ್ಷಮಾಪಣೆಯ ಒಂದು ಛಾಯೆಯಾಗಿತ್ತು, ಯೇಸುವಿನ ರಕ್ತವು ಎರಡನೆಯದರ ಅಂದರೆ ನೂತನ ಮಾರ್ಗವು ಅಧೀನತೆಯಲ್ಲಿ ಇರುವವರಿಗಾಗಿ,

ಹಾಗೆಯೇ *ಮೊದಲನೆಯದರ* ಅಧೀನತೆಯಲ್ಲಿ ಇರುವವರಿಗಾಗಿ ಕ್ಷಮಾಪಣೆಯ ತಳಹದಿಯಾಗಿತ್ತು ಎಂಬುದನ್ನು ನಾವು ಕಲಿತುಕೊಂಡಿದ್ದೇವೆ (ಇಬ್ರಿಯ 9:15). ಪ್ರಾಣಿಗಳ ರಕ್ತವು ಕೇವಲ ಒಂದು ಗುರುತಾಗಿತ್ತು, ಆದರೆ ಆ ಗುರುತು ಯೇಸುವಿನ ರಕ್ತದಿಂದ ಬೆಂಬಲಿಸಲ್ಪಟ್ಟಿತು. ಯೇಸುವು ಶಿಲುಬೆಯ ಮೇಲೆ ಸಾಯುವನು ಎಂಬುದನ್ನು ತಿಳಿಯಲು ಯೇಸುವು ಶಿಲುಬೆಯ ಮೇಲೆ ಮರಣ ಹೊಂದುವವರೆಗೆ ದೇವರು ಕಾಯಬೇಕಾಗಿರಲಿಲ್ಲ, ಸೃಷ್ಟಿಗಿಂತ ಮೊದಲೇ ದೇವರು ಯೇಸುವಿನ ಮರಣವನ್ನು ಯೋಜಿಸಿದ್ದನು, ಮುನ್ನೋಡಿದ್ದನು ಮತ್ತು ಮುಂದಾಗಿ ತಿಳಿದು ಕೊಂಡಿದ್ದನು (1 ಪೇತ್ರ 1:18-20).

## II. ನೂತನ ಮಾರ್ಗಕ್ಕಾಗಿ ಸಿದ್ಧತೆ

ಹಳೇ ಒಡಂಬಡಿಕೆಯು ಪರಿಶುದ್ಧಾತ್ಮನ ಮುಖಾಂತರ ಕೊಡಲ್ಪಟ್ಟಿತು (2 ಪೇತ್ರ 1:19, 20) ಮತ್ತು ಯೇಸುವು ಭೂಲೋಕಕ್ಕೆ ಬರುವ ಮೊದಲು ಬರೆದಿಡಲ್ಪಟ್ಟಿತ್ತು, ಆದರೆ ಯೇಸುವು ಶಿಲುಬೆಯ ಮೇಲೆ ಮರಣ ಹೊಂದಿದ ನಂತರವೂ ಆತನ ಬೋಧನೆಯಲ್ಲಿ ಯಾವುದೂ ಬರೆದಿಡಲ್ಪಟ್ಟಿರಲಿಲ್ಲ. ಯೇಸುವಿನ ಬೋಧನೆಯನ್ನು *ಜ್ಞಾಪಿಸಿಕೊಳ್ಳುವದಕ್ಕಾಗಿ* ಸಾಧನವನ್ನೂ ಮತ್ತು *ನೂತನ ಮಾರ್ಗವನ್ನು* ಪ್ರಸಂಗಿಸುವದಕ್ಕಾಗಿ ಒಂದು ಪ್ರಾರಂಭದ ಸ್ಥಳವನ್ನೂ ಒದಗಿಸಬೇಕಾಗಿತ್ತು.

1. ಒಂದು ಪಟ್ಟಣದಿಂದ ಕರ್ತನ ವಾಕ್ಯವು ಕೊನೆಯ ದಿನಗಳಲ್ಲಿ ಹೊರಡುವುದೆಂದು ದೇವರು ವಾಗ್ದಾನ ಮಾಡಿದನು. [ಓದಿರಿ ಯೆಶಾಯ 2:3.] ಕರ್ತನ ವಾಕ್ಯವು *ಯಾವ ಪಟ್ಟಣದಿಂದ* ಹೊರಡುವುದು? [ಖಾಲಿಯಾದ ಸ್ಥಳದಲ್ಲಿ "ಯೆರೂಸಲೇಮ" ಎಂದು ತುಂಬಿರಿ.] "ಅಂತ್ಯಕಾಲದಲ್ಲಿ" ಇದು ಸಂಭವಿಸುವುದು (ಯೆಶಾಯ 2:2). ಹೊಸ ಒಡಂಬಡಿಕೆಯ ಪ್ರಕಾರವಾಗಿ ನಾವು ಈಗ ಕಡೆಯ ದಿನಗಳಲ್ಲಿ ಇರುವೆವು (ಇಬ್ರಿಯ 1:1, 2). ಪೇತ್ರನೂ ಸಹ ಯೇಸುವಿನ ಪುನರುತ್ಥಾನದ ನಂತರದ ಮೊದಲನೆಯ ಪಂಚಾಶತ್ತಮ ದಿನದಂದು ಇದನ್ನು ಸೂಚಿಸಿದನು (ಅಪೊಸ್ತಲರ ಕೃತ್ಯಗಳು 2:1, 14).

2. ಅಪೊಸ್ತಲರನ್ನು ಅವರ ಸೇವೆಗೆ ಸಿದ್ಧಪಡಿಸುವದಕ್ಕಾಗಿ ಪರಿಶುದ್ಧಾತ್ಮನು ಕಳುಹಿಸಲ್ಪಡುವನು ಎಂದು ಯೇಸು ವಾಗ್ದಾನ ಮಾಡಿದನು. [ಓದಿರಿ ಅಪೊಸ್ತಲರ ಕೃತ್ಯಗಳು 1:8.] ಅಪೊಸ್ತಲರು *ಎಲ್ಲಿ* ಸಾಕ್ಷಿಕೊಡಲು ಪ್ರಾರಂಭಿಸುವಂತೆ ಪರಿಶುದ್ಧಾತ್ಮನು *ಯಾವುದರೊಂದಿಗೆ* ಬಂದನು? [ಖಾಲಿಯಾದ ಸ್ಥಳದಲ್ಲಿ "ಬಲ" ಮತ್ತು "ಯೆರೂಸಲೇಮ" ಎಂದು ತುಂಬಿರಿ. *ಹಿಂಬದಿಯಲ್ಲಿ* ಯೆರೂಸಲೇಮನ್ನು ಚಿತ್ರಿಸಿ, ವಾಕ್ಯವು ಯೆರೂಸಲೇಮಿನಿಂದ ಯೂದಾಯ, ಸಮಾರ್ಯ ಮತ್ತು ಆ ಮೇಲೆ ಲೋಕದ ಕಟ್ಟಕಡೆಯ ವರೆಗೆ ಹೋಗುವುದು ಎಂಬುದನ್ನು ಸೂಚಿಸಿರಿ. ಅದರ ಮೇಲೆ "ಯೇಸು" ಮತ್ತು ಆ ಮೇಲೆ "ಪರಿಶುದ್ಧಾತ್ಮ" ಎಂದು ಬರೆಯಿರಿ. ಪುಟ 144ನ್ನು ನೋಡಿರಿ.]

3. ಪರಿಶುದ್ಧಾತ್ಮನು ಅಪೊಸ್ತಲರನ್ನು ಹೇಗೆ ಸಿದ್ಧಪಡಿಸುವನು? [ಓದಿರಿ ಯೋಹಾನ 14:26.] ಆತನು ಅಪೊಸ್ತಲರಿಗೆ *ಎಷ್ಟನ್ನು* ಬೋಧಿಸುವನು ಮತ್ತು ಯೇಸುವು ಅವರಿಗೆ ಬೋಧಿಸಿದ್ದರಲ್ಲಿ ಅವರು ಜ್ಞಾಪಿಸಿಕೊಳ್ಳುವಂತೆ *ಎಷ್ಟು* ಸಹಾಯ ಮಾಡುವನು? [ಖಾಲಿಯಾದ ಸ್ಥಳದಲ್ಲಿ "ಎಲ್ಲವನ್ನೂ" ಎಂದು ತುಂಬಿರಿ.] ಅಪೊಸ್ತಲರಿಗೆ ಆತನು ಎಷ್ಟು ಸತ್ಯವನ್ನು ಕೊಡುವನು? [ಓದಿರಿ ಯೋಹಾನ 16:13.] *ಎಷ್ಟು* ಸತ್ಯವನ್ನು ಆತನು ಅವರಿಗೆ ಕೊಡುವನು? [ಖಾಲಿಯಾದ ಸ್ಥಳದಲ್ಲಿ "ಎಲ್ಲವನ್ನೂ" ಎಂದು ತುಂಬಿರಿ.]

[ಕಲಿಯುವವನಿಗೆ, ಅಪೊಸ್ತಲರಿಗೆ ಆತ್ಮನು ಎಲ್ಲಾ ಸತ್ಯವನ್ನು ಕೊಡುವದರ ಬಗ್ಗೆ

ಯಾವುದೇ ಪ್ರಶ್ನೆಯಿದ್ದರೆ, ಈ ವಾಗ್ದಾನವು ಕೊಡಲ್ಪಟ್ಟಾಗ, *ಕೇವಲ* ಅಪೊಸ್ತಲರು ಮಾತ್ರವೇ ಹಾಜರಿದ್ದರು ಎಂಬುದನ್ನು ತೋರಿಸಿರಿ (ಯೋಹಾನ 13:1-4; ಮತ್ತಾಯ 26:20; ಲೂಕ 22:13, 14.)]

4. ಯಾವಾಗ ಮತ್ತು ಎಲ್ಲಿ ಅಪೊಸ್ತಲರ ಮೇಲೆ ಪರಿಶುದ್ಧಾತ್ಮನು ಬಂದನು? [ಓದಿರಿ ಅಪೊಸ್ತಲರ ಕೃತ್ಯಗಳು 2:4.] ಪರಿಶುದ್ಧಾತ್ಮನಿಗಾಗಿ ಕಾದುಕೊಂಡಿರಬೇಕೆಂದು ಯೇಸು ಹೇಳಿದ ಸ್ಥಳದಲ್ಲಿ (ಲೂಕ 24:49; ಅಪೊಸ್ತಲರ ಕೃತ್ಯಗಳು 1:4), ಅವರು ಯೆರೂಸಲೇಮಿನಲ್ಲಿ ಕಾದುಕೊಂಡಿದ್ದಾಗ (ಅಪೊಸ್ತಲರ ಕೃತ್ಯಗಳು 2:5), ಅವರು *ಯಾರಿಂದ* ತುಂಬಲ್ಪಟ್ಟರು? [ಖಾಲಿಯಾದ ಸ್ಥಳದಲ್ಲಿ "ಪರಿಶುದ್ಧಾತ್ಮ" ಎಂದು ತುಂಬಿರಿ.] ಆಗ ಅವರು ಯೇಸುವನ್ನು ಕುರಿತು ಸಾಕ್ಷಿಕೊಡಲು ಪ್ರಾರಂಭಿಸಿದರು (ಅಪೊಸ್ತಲರ ಕೃತ್ಯಗಳು 2:22).

[*ಹಿಂಬದಿಯಲ್ಲಿ* ಯೇಸುವು ಹೂಣಲ್ಪಟ್ಟಿದ್ದನ್ನು ಎಬ್ಬಿಸಲ್ಪಟ್ಟಿದ್ದನ್ನು ಮತ್ತು ದಿವಾರೋಹಣನಾದದ್ದನ್ನು ಚಿತ್ರಿಸಿರಿ. ಇದರ ಮೇಲೆ "ಹೊಸ ಒಡಂಬಡಿಕೆ" ಎಂದು ಬರೆಯಿರಿ. ಪುಟ 144ನ್ನು ನೋಡಿರಿ.] ಪಂಚಾಶತ್ತಮ ಹಬ್ಬವು ಪಸ್ಕಾಹಬ್ಬದ ನಂತರ ಐವತ್ತು ದಿನಗಳಾದ ಮೇಲೆ ಬರುತ್ತದೆ (ಯಾಜಕಕಾಂಡ 23:15). ಯೇಸುವು ಪಸ್ಕ ಹಬ್ಬದ ಅಂತ್ಯದಲ್ಲಿ ಎಬ್ಬಿಸಲ್ಪಟ್ಟನು. ಯೇಸುವಿನ ಪುನರುತ್ಥಾನದ ನಂತರದ ಐವತ್ತು ದಿನಗಳನಂತರ ಪಂಚಾಶತ್ತಮ ಹಬ್ಬ ಬಂದಿತು. ಆತನು ತನ್ನ ಪುನರುತ್ಥಾನದ ನಂತರ ಪರಲೋಕಕ್ಕೆ ಏರಿಹೋಗುವ ಮೊದಲು ನಲ್ವತ್ತು ದಿನ ಆತನು ಭೂಲೋಕದಲ್ಲಿದ್ದನು (ಅಪೊಸ್ತಲರ ಕೃತ್ಯಗಳು 1:3). ಪಂಚಾಶತ್ತಮ ಹಬ್ಬವು ಆತನು ಪರಲೋಕಕ್ಕೆ ಹಿಂದಿರುಗಿ ಹೋದ ನಂತರ ಕೇವಲ ಹತ್ತು ದಿನಗಳ ನಂತರ ಇದ್ದಿರಬೇಕು. ಆದುದರಿಂದ ಯೇಸುವು ಪರಲೋಕಕ್ಕೆ *ಏರಿಹೋದ ನಂತರ* ಹತ್ತು ದಿನಗಳಲ್ಲಿ ಪರಿಶುದ್ಧಾತ್ಮನು ಅಪೊಸ್ತಲರಿಗೆ ಕಳುಹಿಸಲ್ಪಟ್ಟನು. [*ಹಿಂಬದಿಯಲ್ಲಿ* "40 ದಿನಗಳು" ಮತ್ತು "10 ದಿನಗಳು" ಎಂದು ಇದನ್ನು ಸೂಚಿಸಲು ಬರೆಯಿರಿ. ಪುಟ 144ನ್ನು ನೋಡಿರಿ.]

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ಕೊನೆಯ ದಿನಗಳಲ್ಲಿ ಕರ್ತನ ವಾಕ್ಯವು ಯೆರೂಸಲೇಮಿನಿಂದ ಹೋಗುವುದೆಂದು ದೇವರು ಪ್ರವಾದಿಸಿದನು ಮತ್ತು ಅದಕ್ಕಾಗಿ ಸಿದ್ಧತೆ ಮಾಡಿದನು ಎಂದು ಕಲಿತುಕೊಂಡಿದ್ದೇವೆ. ದೇವರು ಪರಿಶುದ್ಧ ಬರಹಗಳಲ್ಲಿ ವಾಗ್ದಾನ ಮಾಡಿದಂತೆ ತನ್ನ ಹೆಸರಿನಲ್ಲಿ ರಕ್ಷಣೆಯನ್ನು *ಯೆರೂಸಲೇಮಿನಿಂದ* ಪ್ರಸಂಗಿಸಲಿಕ್ಕೆ ಸಿದ್ಧರಾಗಿರುವಂತೆ ಅಪೊಸ್ತಲರಿಗೆ ಯೇಸುವು ಪರಿಶುದ್ಧಾತ್ಮನನ್ನು ಕಳುಹಿಸಿದನು (ಲೂಕ 24:46, 47). ಯೇಸುವಿನ ಪುನರುತ್ಥಾನದ ನಂತರದ ಮೊದಲನೆಯ ಪಂಚಾಶತ್ತಮ ಹಬ್ಬದ ದಿನದಂದು ಅವರು ಇದನ್ನು ಮಾಡಿದರು (ಅಪೊಸ್ತಲರ ಕೃತ್ಯಗಳ 2:5, 22).

## III. ಕ್ಷಮಾಪಣೆಯು ಕೊಡಲ್ಪಟ್ಟದ್ದು

1. ಯೇಸು ಕ್ರಿಸ್ತನ ಹೆಸರಿನಲ್ಲಿ ರಕ್ಷಣೆಯನ್ನು ಪ್ರಸಂಗಿಸಿದವರಲ್ಲಿ ಪೇತ್ರನು *ಮೊದಲನೆಯವನು.* ಸಿನಾಯಿ ಪರ್ವತದಿಂದ ಬೋಧಿಸಲ್ಪಟ್ಟ ಅಗತ್ಯತೆಗಳನ್ನು ಪೂರೈಸಲು ಏನು ಮಾಡಬೇಕೆಂದು ತನ್ನನ್ನು ಕೇಳಿದವರಿಗೆ ಪೇತ್ರನು ಏನು ಮಾಡಬೇಕೆಂದು ಹೇಳುತ್ತಿದ್ದನು? ಪ್ರಾಣಿ ಯಜ್ಞಗಳನ್ನು ಸಮರ್ಪಿಸಬೇಕೆಂದು ಅವನು ಅವರಿಗೆ ಹೇಳಬಹುದಿತ್ತು, ಯೇಸುವಿನ ಮರಣವು ಸಂಪೂರ್ತಿಯಾದದ್ದರೊಂದಿಗೆ, ಯೇಸುವಿನ ರಕ್ತದಿಂದ ಕ್ಷಮಾಪಣೆಯ ಹೊಸ ಮಾರ್ಗವು ಈಗ ಪ್ರಾರಂಭವಾಗಿರುತ್ತದೆ. ಹೊಸ ಮಾರ್ಗದ ಅಧೀನತೆಯಲ್ಲಿ ಕ್ಷಮಾಪಣೆಯ ಶರತ್ತುಗಳು ಯಾವವು? [ಓದಿರಿ ಅಪೊಸ್ತಲರ ಕೃತ್ಯಗಳು 2:38.] ಯೇಸು ಕ್ರಿಸ್ತನ ಹೆಸರಿನಲ್ಲಿ ಯೇಸುವಿನಲ್ಲಿಯ ವಿಶ್ವಾಸಿಗಳು *ಏನನ್ನು*

ಮಾಡಬೇಕೆಂದು ಹೇಳಲ್ಪಟ್ಟಿರುವರು? [ಖಾಲಿಯಾದ ಸ್ಥಳದಲ್ಲಿ "ಮಾನಸಾಂತರ ಪಡು" ಮತ್ತು "ಬಾಪ್ತಿಸ್ಮ ಹೊಂದಿಕೋ" ಎಂದು ತುಂಬಿರಿ.]

2. ಪ್ರಾಣಿ ಯಜ್ಞವನ್ನು ಸಮರ್ಪಿಸಬೇಕೆಂದು ಪೇತ್ರನು ಅವರಿಗೆ ಯಾಕೆ ಹೇಳ ಅಲ್ಲ? ಯೇಸುವು ಶಿಲುಬೆಯ ಮೇಲೆ ಮರಣ ಹೊಂದಿದಾಗ ಹಳೇ ಮಾರ್ಗವು ರದ್ದು ಪಡಿಸಲ್ಪಟ್ಟಿತು. ಯೆರೂಸಲೇಮಿನಲ್ಲಿ ಪ್ರಾರಂಭಿಸಿ, ಹೊಸ ಮಾರ್ಗದ ಅಗತ್ಯತೆಗಳು ಯಾವವವೆಂದು ಪೇತ್ರನು ಪ್ರಸಂಗಿಸಿದನು. [ಓದಿರಿ ಲೂಕ 24:47.] ಯೆರೂಸಲೇಮಿನಲ್ಲಿ ಪೇತ್ರನು ಪ್ರಸಂಗಿಸಿದ ಈ ಸಂದೇಶವು *ಯಾರಿಗಾಗಿ ಇತ್ತು?* [ಖಾಲಿಯಾದ ಸ್ಥಳದಲ್ಲಿ "ಎಲ್ಲರಿಗೂ" ಎಂದು ತುಂಬಿರಿ. ಹಿಂಬದಿಯಲ್ಲಿ "ಎಲ್ಲಾ ಜನಾಂಗಗಳ" ಎಂಬುದರ ಕೆಳಗೆ "ಮಾನಸಾಂತರ ಪಡಿರಿ ಮತ್ತು ಪಾಪಗಳ ಪರಿಹಾರಕ್ಕಾಗಿ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ" (ಅಪೊಸ್ತಲರ ಕೃತ್ಯಗಳು 2:38) ಎಂದು ಬರೆಯಿರಿ.]

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ಹೊಸ ಮಾರ್ಗದ ಅಧೀನತೆಯಲ್ಲಿ ಯೇಸುವಿನಲ್ಲಿ ನಂಬಿಕೆ ಇಡುವವರು ಯೇಸುವಿನ ರಕ್ತವು ಅವರನ್ನು ಅವರ ಪಾಪಗಳಿಂದ ಶುದ್ಧೀಕರಿಸಿಕೊಳ್ಳುವಂತೆ ಮಾನಸಾಂತರ ಪಡಬೇಕು ಮತ್ತು ಬಾಪ್ತಿಸ್ಮ ಹೊಂದಿಕೊಳ್ಳಬೇಕು ಎಂಬುದನ್ನು ಕಲಿತುಕೊಂಡಿದ್ದೇವೆ.

## IV. **ಉತ್ತರಗಳು**

ಯೆರೂಸಲೇಮಿನಲ್ಲಿ ಪ್ರಸಂಗಿಸಲ್ಪಟ್ಟ ಸಂದೇಶವು ಅವರಿಗೆ ಪ್ರಸಂಗಿಸಲ್ಪಟ್ಟಾಗ, ಜಗತ್ತಿನ ಉಳಿದ ಭಾಗದಲ್ಲಿ ಜನರು ಹೇಗೆ ಪ್ರತಿಕ್ರಿಯಿಸಿದರು? ಅವರೆಲ್ಲರೂ ಒಂದೇ ರೀತಿಯಲ್ಲಿ ಉತ್ತರಕೊಟ್ಟರೋ? ಅಪೊಸ್ತಲರ ಕೃತ್ಯಗಳ ಗ್ರಂಥವು ಎಲ್ಲಾ ಉದಾಹರಣೆಗಳಲ್ಲಿ ಕ್ಷಮಿಸಲ್ಪಡಬೇಕಾದರೆ ಏನು ಮಾಡಬೇಕೆಂದು ಹೇಳಿರುವದನ್ನು ದಾಖಲೆ ಮಾಡುವದಿಲ್ಲ ಆದರೆ ಅವರು ಹೇಗೆ ಉತ್ತರ ಕೊಟ್ಟರು ಎಂಬುದನ್ನು ಹೇಳುತ್ತದೆ. ಪ್ರತಿಯೊಂದು ವಿಷಯದಲ್ಲಿ ಕ್ಷಮಾಪಣೆಯ ಶರತ್ತುಗಳನ್ನು ಕೊಡುವ ಅಗತ್ಯತೆ ಇರುವದಿಲ್ಲ ಯಾಕಂದರೆ ಯೆರೂಸಲೇಮಿನಲ್ಲಿ ಪ್ರಾರಂಭಿಸಿ ಉಳಿದ ಜಗತ್ತಿಗೆಲ್ಲಾ ಪ್ರಸಂಗಿಸಲ್ಪಡುವುದು ಎಂಬ ಭರವಸೆಯು ಕೊಡಲ್ಪಟ್ಟಿದೆ. ಜಗತ್ತಿನ ಉಳಿದ ಭಾಗಕ್ಕೆ ಯಾವುದು ಪ್ರಸಂಗಿಸಲ್ಪಟ್ಟಿತು ಎಂಬುದನ್ನು ಕಂಡುಕೊಳ್ಳಲು ಯೆರೂಸಲೇಮಿನಲ್ಲಿ ಏನು ಪ್ರಸಂಗಿಸಲ್ಪಟ್ಟಿತೆಂದು ಕಂಡುಕೊಳ್ಳುವ ಅಗತ್ಯತೆಯಿದೆ.

ಚಿಕಾಗೋದಲ್ಲಿ ಪ್ರಾರಂಭಿಸಿ ಯುನೈಟೆಡ್ ಸ್ಟೇಟ್ಸ್‌ದ ಪ್ರತಿಯೊಬ್ಬರಿಗೂ ಪುಸ್ತಕದಲ್ಲಿಯ ಕ್ರಮಕ್ಕನುಗುಣವಾಗಿ ಒಂದು ವಿಶಿಷ್ಟ ವ್ಯಾಕ್ಯೂಮ್ ಕ್ಲೀನರರನ್ನು ಪ್ರದರ್ಶಿಸಲು ಮತ್ತು ಮಾರಲು ತನ್ನ ಸೇಲ್ಸ್‌ಮೆನ್ನರಿಗೆ ವ್ಯಾಕ್ಯೂಮ್ ಕ್ಲೀನರ ಕಂಪನಿಯ ಮ್ಯಾನೇಜರ ಆದೇಶಿಸಿದ್ದಕ್ಕೆ ಇದನ್ನು ಹೋಲಿಸಬಹುದು. ಏನು ಸಂಭವಿಸಿತೆಂದು ಹೇಳುವ ವ್ಯಕ್ತಿಯು ಅದನ್ನು ಈ ರೀತಿಯಲ್ಲಿ ಹೇಳಬಹುದು:

ಸೇಲ್ಸ್‌ಮೆನ್ನರು ಚಿಕಾಗೋವಿಗೆ ಹೋದರು ಮತ್ತು ವ್ಯಾಕ್ಯೂಮ್ ಕ್ಲೀನರರನ್ನು ಪ್ರದರ್ಶಿಸಿದರು. ಅಲ್ಲಿಯವರು ಕೆಲವರು "ವ್ಯಾಕ್ಯೂಮ್ ಕ್ಲೀನರಿಗೆ ನಾವು ಎಷ್ಟು ಕೊಡಬೇಕು?" ಎಂದು ಕೇಳಿದರು. "ವ್ಯಾಕ್ಯೂಮ್ ಕ್ಲೀನರರನ್ನು ಮುನ್ನೂರು ಡಾಲರುಗಳಿಗೆ ಕೊಳ್ಳಬಹುದು" ಎಂದು ಸೇಲ್ಸ್‌ಮೆನ್ನರು ಉತ್ತರಕೊಟ್ಟರು. ಪ್ರದರ್ಶನದಲ್ಲಿ ತೃಪ್ತಿಹೊಂದಿದವರು ಅವುಗಳನ್ನು ಕೊಂಡುಕೊಂಡರು.

ಅವರು ಅಲ್ಲಿಂದ ಸೇಂಟ್ ಲೂಯಿಗೆ ಹೋದರು ಅಲ್ಲಿ ಅವುಗಳನ್ನು ಪ್ರದರ್ಶಿಸಿದರು. ಮೆಚ್ಚಿಕೊಂಡವರು ಅವುಗಳನ್ನು ಕೊಂಡರು. ಅವರು ಲಾಸ್ ಎಂಜಲ್ಸಗೆ ಹೋದರು, ಅಲ್ಲಿಯು ಜನರು ವ್ಯಾಕ್ಯೂಮ್ ಕ್ಲೀನರಗಳನ್ನು ಕೊಂಡುಕೊಂಡರು.

ಇದನ್ನು ವರದಿ ಮಾಡುತ್ತಿರುವವನು ವ್ಯಾಕ್ಯೂಮ್ ಕ್ಲೀನರ್ ಕೊಂಡು ಕೊಳ್ಳುವವರಿಗೆ ಅವರು ಅದನ್ನು ಮುನ್ನೂರು ಡಾಲರುಗಳಿಗೆ ಕೊಳ್ಳಬಹುದು ಎಂದು ಪ್ರತೀಸಲ ಹೇಳಿದರೆಂದು ವರದಿ ಮಾಡಬಹುದೋ? ನಿಶ್ಚಯವಾಗಿಯೂ ಇಲ್ಲ.

ಹಾಗೆಯೇ ಲೂಕನು, ಅಪೊಸ್ತಲರ ಕೃತ್ಯಗಳ ಗ್ರಂಥವನ್ನು ಬರೆಯುವಾಗ, ಕ್ಷಮಾಪಣೆಯನ್ನು ಬಯಸುವವರಿಗೆ ಅವರು ಮಾನಸಾಂತರ ಪಡಬೇಕು ಮತ್ತು ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಮಾಡಿಸಿಕೊಳ್ಳಬೇಕು ಎಂದು ಪ್ರತೀಸಲ ಹೇಳುವ ಅಗತ್ಯತೆಯಿರಲಿಲ್ಲ. ಇದು ಅರ್ಥ ಮಾಡಿಕೊಳ್ಳಲ್ಪಡಬೇಕಾಗಿತ್ತು. ಯಾಕಂದರೆ ಯೆರೂಸಲೇಮಿನಲ್ಲಿ ಪ್ರಸಂಗಿಸಲ್ಪಟ್ಟದ್ದು ಲೋಕದಲ್ಲೆಲ್ಲಾ ಪ್ರಸಂಗಿಸಲ್ಪಡಬೇಕಾಗಿತ್ತು. ಅವರು ಬಾಪ್ತಿಸ್ಮ ಹೊಂದುವದರಿಂದ ಪ್ರತಿಕ್ರಿಯೆ ತೋರಿಸಿದ ಸಂಗತಿಯು, ಪಾಪಗಳ ಪರಿಹಾರಕ್ಕಾಗಿ ಯೇಸು ಕ್ರಿಸ್ತನ ಹೆಸರಿನಲ್ಲಿ ಬಾಪ್ತಿಸ್ಮ ಹೊಂದಲು ಅವರು ನಿರ್ದೇಶಿಸಲ್ಪಟ್ಟಿದ್ದರು ಎಂಬುದನ್ನು ತೋರಿಸುತ್ತದೆ.

1-8. ಜನರು *ಹೇಗೆ* ಪ್ರತಿಕ್ರಿಯಿಸಿದರು? [ಅಪೊಸ್ತಲರ ಕೃತ್ಯದ ಈ ವಾಕ್ಯಭಾಗಗಳನ್ನು - 2:41; 8:12; 8:36-39; 9:18; 10:48; 16:33; 18:8; 19:5 - ಓದಿದ ನಂತರ ಖಾಲಿಯಾದ ಸ್ಥಳಗಳಲ್ಲಿ "ಬಾಪ್ತಿಸ್ಮ ಹೊಂದಿದರು" ಎಂದು ತುಂಬಿರಿ.] ಪ್ರತಿಕ್ರಿಯೆಗಳು ಯಾವಾಗಲೂ ಒಂದೇ ರೀತಿಯಲ್ಲಿ ಇದ್ದ ಸಂಗತಿಯು ಸಂದೇಶವೂ ಒಂದೇ ರೀತಿಯಾಗಿ ಇತ್ತೆಂಬುದನ್ನು ಸೂಚಿಸುತ್ತದೆ. ಅವರು ಕ್ಷಮಿಸಲ್ಪಡಬೇಕಾದರೆ ಏನು ಮಾಡಬೇಕೆಂಬುದೂ ಸಹ ಪ್ರಕಟಿಸಲ್ಪಡದೇ ಇದ್ದರೂ ಸಹ, ಪ್ರತಿಕ್ರಿಯೆಯ ಒಂದೇ ರೀತಿಯಾಗಿರುವಿಕೆಯು, ಯೆರೂಸಲೇಮಿನಲ್ಲಿ ಪ್ರಸಂಗಿಸಲ್ಪಟ್ಟಿದ್ದು ಎಲ್ಲಾ ಜನರಿಗೆ ವಾಕ್ಯವು ಪ್ರಸಂಗಿಸಲ್ಪಟ್ಟ ಎಲ್ಲಾ ಕಡೆಗಳಲ್ಲಿಯೂ ಪ್ರಸಂಗಿಸಲ್ಪಟ್ಟಿತೆಂಬುದನ್ನು ತೋರಿಸುತ್ತದೆ.

ಈ ಭಾಗದಲ್ಲಿ ನಾವು ಏನನ್ನು ಕಲಿತು ಕೊಂಡಿದ್ದೇವೆ? ಪ್ರತಿಯೊಂದು ಕಡೆಯಲ್ಲಿಯೂ ವಾಕ್ಯವು ಪ್ರಸಂಗಿಸಲ್ಪಟ್ಟಿತು ಮತ್ತು ಎಲ್ಲಾ ಜನರು ಒಂದೇ ರೀತಿಯಲ್ಲಿ ಪ್ರತಿಕ್ರಿಯೆ ತೋರಿಸಿದರು ಎಂಬುದನ್ನು ಕಲಿತುಕೊಂಡಿದ್ದೇವೆ.

## V. ಬಾಪ್ತಿಸ್ಮದ ನಂತರ

1. ಒಬ್ಬನು ಬಾಪ್ತಿಸ್ಮ ಹೊಂದಿದ ನಂತರ ಏನನ್ನು ನಿರೀಕ್ಷಿಸಬಹುದು. ಬಾಪ್ತಿಸ್ಮ ಹೊಂದಿದ ವ್ಯಕ್ತಿಯು ಯಾವ ರೀತಿಯ ಜೀವನ ಜೀವಿಸಬೇಕು? [ಓದಿರಿ ರೋಮಾಪುರ 6:4.] ಬಾಪ್ತಿಸ್ಮ ಹೊಂದಿದ ವ್ಯಕ್ತಿಯು *ಯಾವ ರೀತಿಯ ಜೀವನ* ಜೀವಿಸಬೇಕು? [ಖಾಲಿಯಾದ ಸ್ಥಳದಲ್ಲಿ "ಹೊಸಬನಾಗಿ" ಎಂದು ತುಂಬಿರಿ.]

2. ಒಬ್ಬ ವ್ಯಕ್ತಿಯು ಯಾಕೆ ಬಾಪ್ತಿಸ್ಮ ಮಾಡಿಸಿಕೊಳ್ಳಬೇಕು? [ಓದಿರಿ ಅಪೊಸ್ತಲರ ಕೃತ್ಯಗಳು 2:38.] *ಯಾವ ಕಾರಣಕ್ಕಾಗಿ* ವಿಶ್ವಾಸಿಗಳು ಮಾನಸಾಂತರ ಪಟ್ಟು ಬಾಪ್ತಿಸ್ಮ ಮಾಡಿಸಿಕೊಳ್ಳಬೇಕೆಂದು ಪೇತ್ರನು ಹೇಳಿದನು? [ಖಾಲಿಯಾದ ಸ್ಥಳದಲ್ಲಿ "ಕ್ಷಮಿಸಲ್ಪಡುವದಕ್ಕಾಗಿ" ಎಂದು ತುಂಬಿರಿ.] ತಾರ್ಸದ ಸೌಲನು (ಅನಂತರದಲ್ಲಿ ಅಪೊಸ್ತಲ ಪೌಲನೆಂದು ಕರೆಯಲ್ಪಟ್ಟನು) ತನ್ನ ಪಾಪಗಳು ತೊಳೆಯಲ್ಪಡಬೇಕಾದರೆ ಏನು ಮಾಡಬೇಕೆಂದು ಹೇಳಲ್ಪಟ್ಟನು? [ಓದಿರಿ ಅಪೊಸ್ತಲರ ಕೃತ್ಯಗಳು 22:16.] ಏಳಬೇಕು ಮತ್ತು ಬಾಪ್ತಿಸ್ಮ ಹೊಂದಬೇಕು ಎಂದು ಸೌಲನಿಗೆ ಹೇಳಲ್ಪಟ್ಟಿತು ಮತ್ತು ಅವನ ಪಾಪಗಳಿಗೆ *ಏನಾಗುವುದು?* [ಖಾಲಿಯಾದ ಸ್ಥಳದಲ್ಲಿ "ತೊಳೆಯಲ್ಪಡುವುದು" ಎಂದು ತುಂಬಿರಿ.]

3. ಲೋಕದ ಕಟ್ಟಕಡೆಯ ವರೆಗೆ ಹೋಗಿ, ಸುವಾರ್ತೆಯನ್ನು ಸಾರಿರಿ ಎಂದು

ಯೇಸು ಅಪೊಸ್ತಲರಿಗೆ ಹೇಳಿದನು, ಸುವಾರ್ತೆಯು ಪ್ರಸಂಗಿಸಲ್ಪಟ್ಟಾಗ ಯಾರು ರಕ್ಷಿಸಲ್ಪಡುವರು ಎಂದು ಯೇಸು ಹೇಳಿದನು? [ಓದಿರಿ ಮಾರ್ಕ 16:15, 16.] ಸುವಾರ್ತೆಯನ್ನು ನಂಬಿದವರು ಮತ್ತು ಬಾಪ್ತಿಸ್ಮ ಹೊಂದಿದವರು *ಏನಾಗುವರು* ಎಂದು ಯೇಸು ಹೇಳಿದನು? [ಖಾಲಿಯಾದ ಸ್ಥಳದಲ್ಲಿ "ರಕ್ಷಿಸಲ್ಪಡುವರು" ಎಂದು ತುಂಬಿರಿ.]

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ಒಬ್ಬ ವ್ಯಕ್ತಿಯು ಬಾಪ್ತಿಸ್ಮ ಹೊಂದಿದರೆ ಅವನು ಹೊಸ ಜೀವಿತ ಜೀವಿಸುವನೆಂದು ನಿರೀಕ್ಷಿಸಲ್ಪಟ್ಟಿದೆ ಎಂಬುದನ್ನು ಕಲಿತುಕೊಂಡಿದ್ದೇವೆ. ಯೇಸುವಿನಲ್ಲಿ ನಂಬಿಕೆಯಿಟ್ಟ ವ್ಯಕ್ತಿ ತನ್ನ ಪಾಪಗಳಿಗಾಗಿ ಮಾನಸಾಂತರ ಪಟ್ಟಿದ್ದಾನೆ, ಮತ್ತು ಬಾಪ್ತಿಸ್ಮ ಮಾಡಿಸಿಕೊಂಡವನು ಕ್ಷಮಿಸಲ್ಪಟ್ಟಿದ್ದಾನೆ, ಅವನ ಪಾಪಗಳು ತೊಳೆಯಲ್ಪಟ್ಟಿವೆ; ಮತ್ತು ಅವನು ರಕ್ಷಿಸಲ್ಪಟ್ಟಿದ್ದಾನೆ.

**ಸಾರಾಂಶ**

ಈ ಪಾಠದಲ್ಲಿ ಯೇಸುವು ಮನುಷ್ಯರಿಗಾಗಿ ರಕ್ಷಣೆಯ ಮಾರ್ಗವಾಗಿದ್ದಾನೆ ಎಂದು ಕಲಿತುಕೊಂಡಿದ್ದೇವೆ. ರಕ್ಷಣೆಯ ಆತನ *ಹೊಸ* ಮಾರ್ಗವು ಮೊದಲನೆಯ ಒಡಂಬಡಿಕೆಯ *ಹಳೆ* ಮಾರ್ಗದಂತೆ, ನಿಬಂಧನೆಯ ಅಗತ್ಯತೆಗಳಂತೆ ಇರುವ ಮಾರ್ಗದಂತೆ ಇರುವದಿಲ್ಲ.

I. *ಹಳೇ ಮತ್ತು ಹೊಸ ಮಾರ್ಗಗಳು ಒಂದೇಯಾಗಿರುವವೋ?* ಹಳೇ ಮಾರ್ಗಕ್ಕೆ ಛಾಯೆಯ, ಪ್ರಾಣಿಗಳ ರಕ್ತದ ಅಗತ್ಯತೆಯಿತ್ತು ಆದರೆ ಹೊಸ ಮಾರ್ಗವು ವಾಸ್ತವಿಕತೆಯನ್ನು, ಯೇಸುವಿನ ರಕ್ತವನ್ನು ಒದಗಿಸುತ್ತದೆ. ಈ ಮಾರ್ಗವು ಪಂಚಾಶತ್ತಮ ದಿನದಂದು ಯೆರೂಸಲೇಮಿನಿಂದ ಪ್ರಸಂಗಿಸಲು ಪ್ರಾರಂಭಿಸಲ್ಪಟ್ಟಿತು.

II. *ಹೊಸ ಮಾರ್ಗವು ಬೋಧಿಸಲ್ಪಡಲಿಕ್ಕಾಗುವಂತೆ ಯಾವ ಸಿದ್ಧತೆಯು ಮಾಡಲ್ಪಟ್ಟಿತು?* ಅಪೊಸ್ತಲರ ಮೇಲೆ ಪರಿಶುದ್ಧಾತ್ಮನು ಬಂದಾಗ ಪ್ರಾರಂಭವಾದಂಥ ವಾಕ್ಯವು ಕೊನೆಯ ದಿನಗಳಲ್ಲಿ ಯೆರೂಸಲೇಮಿನಿಂದ ಹೊರಗೆ ಹೋಗುವುದು ಎಂದು ದೇವರು ವಾಗ್ದಾನ ಮಾಡಿದನು. ಪಂಚಾಶತ್ತಮ ದಿನದಂದು, ಪರಿಶುದ್ಧಾತ್ಮನ ಸಹಾಯದಿಂದ, ಅವರು ಎಲ್ಲಾ ಸತ್ಯದಲ್ಲಿ ನಡಿಸಲ್ಪಡುವವರಾದರು. ಆತ್ಮನ ಬರುವಿಕೆಯಿಂದ, ಮೊದಲು ಯೆರುಸಲೇಮಿನಲ್ಲಿ, ಮತ್ತು ಆ ಮೇಲೆ ಲೋಕದ ಕಟ್ಟ ಕಡೆಯವರೆಗೆ ಯೇಸುವಿನ ಹೆಸರಿನಲ್ಲಿ ಕ್ಷಮಾಪಣೆಯನ್ನು ಪ್ರಸಂಗಿಸುವದನ್ನು ಪ್ರಾರಂಭಿಸಲು ಅವರು ಸಿದ್ಧರಾದರು.

III. *ಯೆರೂಸಲೇಮಿನಲ್ಲಿ ಬೋಧಿಸಲ್ಪಡಲು ಪ್ರಾರಂಭವಾದ ಯಾವುದು ಪಾಪಗಳ ಕ್ಷಮಾಪಣೆಗಾಗಿ ಮಾಡಲ್ಪಡಬೇಕಾದ ಅವಶ್ಯಕತೆಯಿತ್ತು?* ಅವರು ಮಾನಸಾಂತರ ಪಡುವ ಮತ್ತು ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಹೊಂದುವ ಅವಶ್ಯಕತೆಯಿತ್ತು ಎಂದು ಪೇತ್ರನು ಬೋಧಿಸಿದನು.

IV. *ಇದು ಬೋಧಿಸಲ್ಪಟ್ಟಾಗ, ಜನರು ಹೇಗೆ ಪ್ರತಿಕ್ರಿಯೆ ತೋರಿಸಿದರು?* ಅವರು ನಂಬುವದರಿಂದ, ಮಾನಸಾಂತರ ಪಡುವದರಿಂದ (ಕೆಲವು ವಿಷಯಗಳಲ್ಲಿ ಇವು ಹೇಳಲ್ಪಟ್ಟಿವೆ ಇಲ್ಲವೇ ಅನ್ವಯಿಸಲ್ಪಟ್ಟಂತೆ ತೋರುತ್ತದೆ) ಮತ್ತು ಬಾಪ್ತಿಸ್ಮ ಮಾಡಿಸಿಕೊಳ್ಳುವದರಿಂದ ಉತ್ತರ ಕೊಟ್ಟರು (ಇದು ಸ್ಪಷ್ಟವಾಗಿ ಹೆಚ್ಚಾದ ಸಂಗತಿಗಳಲ್ಲಿ ಹೇಳಲ್ಪಟ್ಟಿರುತ್ತದೆ).

V. *ಅವರ ಬಾಪ್ತಿಸ್ಮದ ನಂತರ ಏನಾಯಿತು?* ಅವರು ಕ್ಷಮಿಸಲ್ಪಟ್ಟದ್ದರಿಂದ, ಅವರ ಪಾಪಗಳು ತೊಳೆಯಲ್ಪಟ್ಟದ್ದರಿಂದ ಮತ್ತು ಅವರು ರಕ್ಷಿಸಲ್ಪಟ್ಟದ್ದರಿಂದ, ಅವರು

ನೂತನ ಜೀವಿತ ಜೀವಿಸಬೇಕೆಂದು ನಿರೀಕ್ಷಿಸಲ್ಪಟ್ಟರು.

ಪೇತ್ರನು ಇಂದು ಇಲ್ಲಿದ್ದರೆ ಕ್ಷಮಿಸಲ್ಪಡಲಿಕ್ಕೆ ಜನರಿಗೆ ಅವನು ಏನನ್ನು ಬೋಧಿಸುತ್ತಿದ್ದನು ಎಂದು ನೀವು ಯೋಚಿಸುವಿರಿ? ಪೇತ್ರನು ಪ್ರಸಂಗಿಸಿದ್ದನ್ನು ಪ್ರಸಂಗಿಗಳೇ ನೀವು ಕೇಳುತ್ತಿರುವಿರೋ?

[ಬಾಪ್ತಿಸ್ಮವನ್ನು ಕುರಿತು ಪ್ರಶ್ನೆಗಳು ಉದ್ಭವಿಸಿದರೆ, ಮುಂದಿನ ಪಾಠದಲ್ಲಿ ಇದು ಹೆಚ್ಚು ಪೂರ್ಣವಾಗಿ ಹೇಳಲ್ಪಡುವುದು ಎಂದು ಕಲಿಯುವವನಿಗೆ ಭರವಸೆ ಕೊಡಿರಿ. ಮುಂದಿನ ಅಧ್ಯಯನಕ್ಕಾಗಿ ಸಮಯ ಗೊತ್ತುಪಡಿಸಿರಿ.]

© 2009 Truth for Today